ಶ್ರೀ ಅರಗ ಜ್ಞಾನೇಂದ್ರ : ಮೀಟರ್ ಹಾಕಿದ್ದರೆ ಹತ್ತು ರೂಪಾಯಿ ಇಲ್ಲದೆ ಹನ್ನೊಂದು ರೂಪಾಯಿ ಆಗುತ್ತಿತ್ತು.

ಶ್ರೀ ಕೆ.ಬಿ.ಮಲ್ಲಿಕಾರ್ಜುನ : ಅದರ ಬಗ್ಗೆ ಬೇಕಾದರೆ ಪರಿಶೀಲನೆ ಮಾಡಿಸಿ. ಆದರೆ ಈಗ ಇರುವ ವ್ಯವಸ್ಥೆ ಬದಲಾವಣೆ ಮಾಡುವುದು ಬೇಡ. ಎಲ್ಲಿಗೆ ಹೋಗಬೇಕು ಎಂದೇನು ಅವರು ರೇಂಜ್ ಮಾಡಿದ್ದಾರೆ ಅದಕ್ಕೆ ನಾವು ಏನು ಹಣಕೊಡುತ್ತೇವೆ, ಅದು ಸರಿ ಇದೆ.

ಅಧ್ಯಕ್ಷರು : ಇಲ್ಲಿಗೆ ಈ ವಿಚಾರ ಮುಕ್ತಾಯವಾಯಿತು. ಇನ್ನು ನಿಯಮ 69ರ ಅಡಿಯಲ್ಲಿ ಅಲ್ಪಕಾಲಾವಧಿ ಚರ್ಚೆ.

(ಅ) ನಿಯಮ 69ರ ಮೇರೆಗೆ

ತೆಂಗಿನ ಮರಗಳಿಗೆ ತಗಲಿರುವ ನುಸಿ ರೋಗದ ಬಗ್ಗೆ

+ಶ್ರೀ ಬಿ.ಸೋಮಶೇಖರ್ (ಮಳವಳ್ಳಿ) : ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದಲ್ಲಿ ತೆಂಗಿನ ಬೆಳೆಗೆ ನುಸಿ ರೋಗ ಕಾಣಿಸಿಕೊಂಡು ಬೆಳೆ ಹಾನಿಯಾಗುತ್ತಿರುವುದರಿಂದ ಇಡೀ ರಾಜ್ಯದ ರೈತರು ಕಂಗಾಲಾಗಿದ್ದಾರೆ. ಅವರ ಭವಿಷ್ಯದ ಬಗ್ಗೆ ಚಿಂತನೆಯಾಗಿದೆ. ಇಲ್ಲಿ ತೋಟಗಾರಿಕೆಯ ಅಧಿಕಾರಿಗಳು ಕಾಣುತ್ತಿಲ್ಲ. ಸದನದಲ್ಲಿ ಬಹಳ ಮಹತ್ವವಾದ ವಿಚಾರ ಚರ್ಚೆಯಾಗುತ್ತಿದೆ. ಆದ್ದರಿಂದ ಮಾನ್ಯ ತೋಟಗಾರಿಕಾ ಸಚಿವರು ದಯಮಾಡಿ ಹಿರಿಯ ಅಧಿಕಾರಿಗಳನ್ನು ಕರೆಸಬೇಕು. ಕಾರ್ಯದರ್ಶಿಗಳು ಇತರೆ ಅಧಿಕಾರಿಗಳು ಯಾರು ಸದನದಲ್ಲಿ ಹಾಜರಿ ಇಲ್ಲ. ದಯಮಾಡಿ ಅವರನ್ನು ಹೇಳ ಕರೆಸಿ. ತೆಂಗಿನ ಬೆಳೆಗೆ ಕಪ್ಪುತಲೆ ಹುಳುವಿನ ರೋಗವಿತ್ತು, ಆ ರೋಗದ ಬೆನ್ನ ಹಿಂದೆಯೇ ನುಸಿ ರೋಗ ಬಂದಿದೆ. ಇದು ಒಂದು ರೀತಿಯಲ್ಲಿ ತೆಂಗಿನ ಬೆಳೆಗೆ ಬರುವ ಭಾದೆ. ಜೇಡರ ಜಾತಿಗೆ ಸೇರಿದಂಥ ಹುಳುಗಳು ಒಂದೂ, ಒಂದೂವರೆ ತಿಂಗಳ ಕಾಯಿಯ ತೊಟ್ಟಿಗೆ ಹಳದಿ ಬಣ್ಣದ ರೂಪದಲ್ಲಿ ಅಂಟುತ್ತದೆ. ಇದು ಬಹಳ ಸೂಕ್ಷ್ಮವಾಗಿರುವಂಥ ಹುಳ. ಇದು ಎಷ್ಟು ಸೂಕ್ಷ್ಮವಾದುದೆಂದರೆ ಒಂದು ಚುಕ್ಕೆಯನ್ನು ಇಟ್ಟರೆ ಆ ಸ್ಥಳದಲ್ಲೆ ಹದಿನೈದು ಇಪ್ಪತ್ತು ಕ್ರಿಮಿಗಳು ಇರುತ್ತವೆ. ಇದು ಬೆಳಿಗ್ಗೆಯ ಸಮಯದಲ್ಲಿ ಗೊತ್ತಾಗುವುದಿಲ್ಲ, ರಾತ್ರಿವೇಳೆಯಲ್ಲಿ ಕಾಣಿಸುತ್ತದೆ. ಮೊದಲು ಹಳದಿ ಬಣದಿಂದ ಬಂದು ಅನಂತರ ಕಂಡು ಬಣ್ಣಕ್ಕೆ ಪರಿವರ್ತನೆಯಾಗಿ ಇಡೀ ಬೆಳೆಯನ್ನೇ ನಾಶ ಮಾಡತಕ್ಕಂಥ ಭಯಂಕರವಾದ ಪೀಡೆಯಾಗಿದೆ. ಇದು ಕೇವಲ ಭಾರತಕ್ಕೆ ಅಥವಾ ಕರ್ನಾಟಕ ರಾಜ್ಯಕ್ಕೆ ಸೀಮಿತವಾಗಿರುವ ರೋಗವಲ್ಲ. ಇದು ವಿಶ್ವವಿಖ್ಯಾತಿಯಾಗಿರುವಂಥ ರೋಗ. ಇದು ಕೇವಲ ಒಂದೆರಡು ವರ್ಷದಲ್ಲಿ ಕಂಡುಬಂದಿದ್ದಲ್ಲ. ಇದು ಮೊದಲು 1965ರಲ್ಲಿ ಮೆಕ್ಸಿಕೋದಲ್ಲಿ ಕಾಣಿಸಿಕೊಂಡಿತು, ಅನಂತರ 1967ರಲ್ಲಿ ಕೆಮರೂನ್ ದೇಶದಲ್ಲಿ ಕಾಣಿಸಿಕೊಂಡಿತು. ನಂತರ 1971ರಲ್ಲಿ ಕೊಲಂಬಿಯಾದಲ್ಲಿ, 1972ರಲ್ಲಿ ಕ್ಯೂಬಾದಲ್ಲಿ, 1989ರಲ್ಲಿ ಬ್ರೆಜಿಲ್‌ನಲ್ಲಿ ಕಂಡುಬಂದಿತ್ತು. ನಮ್ಮ ಭಾರತ ದೇಶದಲ್ಲಿ ಮೊದಲು ಕೇರಳ ರಾಜ್ಯದಲ್ಲಿ 1996ನೇಇಸವಿಯಲ್ಲಿ ಕಾಣಿಸಿಕೊಂಡಿತು. ಕೇರಳ, ಕರ್ನಾಟಕ, ತಮಿಳುನಾಡು ಈ ಮೂರು ರಾಜ್ಯಗಳಲ್ಲಿ ಬಹಳ ಪ್ರಮುಖವಾಗಿ ಬೆಳೆಯುವ ಬೆಳೆ ತೆಂಗಿನ ಬೆಳೆಯಾಗಿದೆ. ಭಾರತದ 45ರಷ್ಟು ಭಾಗ ತೆಂಗನ್ನು ಕೇರಳದಲ್ಲಿ ಬೆಳೆಯುತ್ತಾರೆ, ನಲವತ್ತರಷ್ಟು ಭಾಗವನ್ನು ಕರ್ನಾಟಕ ಮತ್ತು ತಮಿಳುನಾಡಿನಲ್ಲಿ ಬೆಳೆಯುತ್ತಾರೆ. ಈ ಮೂರು ರಾಜ್ಯಗಳಲ್ಲಿ ಆರ್ಥಿಕವಾಗಿ ದುರ್ಬಲರಾಗಿರುವ ರೈತರು, ಸಣ್ಣ

ಹಿಡುವಳಿದಾರರು, ಸ್ವಲ್ಪ ಜಮೀನು ಇರತಕ್ಕವರು ತೆಂಗನ್ನು ಬೆಳೆದು ಅದರ ಆದಾಯವನ್ನು ಪಡೆಯುತ್ತಿದ್ದಾರೆ. ಇದರಿಂದ ಬಹಳ ಜನ ಬಡ ರೈತರು ಅನುಕೂಲವನ್ನು ಪಡೆಯುತ್ತಿದ್ದಾರೆ. ಇದನ್ನೇ ನಂಬಿಕೊಂಡು ವ್ಯವಸಾಯ ಮಾಡಿರುವ ನಿದರ್ಶನಗಳು ನಮ್ಮಲ್ಲಿದೆ. 1996ರಲ್ಲಿ ಮೊದಲು ಬಾರಿಗೆ ಕೇರಳದಲ್ಲಿ ಇದು ಕಾಣಿಸಿಕೊಂಡಾಗ ಅಲ್ಲಿನ ರೈತರು ಕಂಗಾಲಾಗಿ ಸುಮಾರು ನೂರು ಕೋಟಿ ರೂಪಾಯಿಗಳ ಸಹಾಯಧನವನ್ನು ಅವರು ಕೇಂದ್ರ ಸರ್ಕಾರದಿಂದ ಕೇಳಿದ್ದರು. ಈ ರೋಗವನ್ನು ತಡೆಗಟ್ಟಲು, ಅದರ ನಿವಾರಣೆ ಮಾಡಲು ನಮಗೆ ನೂರು ಕೋಟಿ ರೂಪಾಯಿಗಳ ಸಹಾಯ ಕೊಡಿ ಎಂದು ಕೇಂದ್ರ ಸರ್ಕಾರದೊಂದಿಗೆ ಗಲಾಟೆ ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ ಈ ರೋಗ ಕಾಣಿಸಿಕೊಂಡಿದ್ದು 1998ರಲ್ಲಿ. ಆಗ ಸರ್ಕಾರವಾಗಲಿ, ವಿಜ್ಞಾನಿಗಳಾಗಲಿ, ತೋಟಗಾರಿಕಾ ಇಲಾಖೆಯವರಾಗಲಿ ಇದರ ಬಗ್ಗೆ ಅಷ್ಟಾಗಿ ಗಮನವನ್ನು ಹರಿಸಲಿಲ್ಲವೆಂದು ಹೇಳಬಹುದು. ಇದು ಬಂದ ತಕ್ಷಣ ವಿಜ್ಞಾನಿಗಳು ಒಂದು ಔಷಧಿಯನ್ನು ಕಂಡು ಹಿಡಿದರು. ಯೂನಿವರ್ಸಿಟಿ ಆಫ್ ಆಗ್ರಿಕಲ್ಚರಲ್ ಸೈನ್ಸಸ್‌ನಲ್ಲಿ ಇದನ್ನು ಕಂಡು ಹಿಡಿದರು. ಮೊದಲು ಮಾನೋಕ್ರೋಟೊಫಾನ್ ಮತ್ತು ಡೈಕೊಫೂಲ್‌ನ್ನು ಸಿಂಪರಣೆ ಮಾಡಬೇಕು, ಎರಡು ಮೂರು ತಿಂಗಳ ನಂತರ ಪದೇ ಪದೇ ಇದನ್ನು ಸಿಂಪರಣೆ ಮಾಡಬೇಕು ಎಂಬುದಾಗಿ ಪ್ರಜಾವಾಣಿ ಪತ್ರಿಕೆಯ ದಿನಾಂಕ 15.12.99ರಂದು ಇದರ ಬಗ್ಗೆ ಲೇಖನ ಬಂತು. ತೆಂಗಿನ ಬೆಳೆಗೆ ಬಂದಿರುವ ನುಸಿ ಪೀಡೆಯ ಬಗ್ಗೆ ಮೊದಲೇ ಒಂದು ಮಾತನ್ನು ನಾನು ಹೇಳಬೇಕಾಗಿತ್ತು. ನಮ್ಮ ಪ್ರತಿನಿಧಿಗಿಂತ ಹೆಚ್ಚಾಗಿ ಪತ್ರಿಕೆಗಳು ಇದರ ಬಗ್ಗೆ ಬಹಳ ಹೆಚ್ಚಿನ ಮಹತ್ವವನ್ನು ಕೊಟ್ಟು ರಾಜ್ಯದ ಜನರ ಮತ್ತು ಸದನದ ಗಮನವನ್ನು ಸೆಳೆಯುವಲ್ಲಿ ಸಹಕಾರಿಯಾಗಿದ್ದಾರೆ.

ಎಲ್ಲಾ ಪತ್ರಿಕೆಯವರು ಎಲ್ಲಾ ಜಿಲ್ಲೆಗಳಲ್ಲಿ ಇದರ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ವಹಿಸಿ ಲೇಖನಗಳನ್ನು ಬರೆದಿದ್ದಾರೆ. ಈ ಸಂದರ್ಭವನ್ನು ಉಪಯೋಗಿಸಿಕೊಂಡು ಪತ್ರಿಕೆಯವರನ್ನು ನಾನು ಅಭಿನಂದಿಸುತ್ತೇನೆ. ಇಲ್ಲದಿದ್ದರೆ ಈ ವಿಚಾರ ಇಷ್ಟೊಂದು ಪ್ರಧಾನವಾಗಿ ಚರ್ಚೆಯಾಗುತ್ತಿರಲಿಲ್ಲ. ಇದರ ಬಗ್ಗೆ ಇಷ್ಟೊಂದು ಆಸಕ್ತಿಯನ್ನು ವಹಿಸತಕ್ಕ ಅವಕಾಶವು ಸಹ ಬರುತ್ತಿರಲಿಲ್ಲ. ಆದ್ದರಿಂದ ಪ್ರತ್ರಿಕೆಯವರನ್ನು ನಾನು ಅಭಿನಂದಿಸುತ್ತೇನೆ. ಪ್ರಜಾವಾಣಿ ಪತ್ರಿಕೆ ದಿನಾಂಕ 15-2-99ರಲ್ಲಿ ವಿಜ್ಞಾನಿಗಳಾದ ಶ್ರೀ ಪಿಲ್ಲಿಕ್.ಬಿ. ಮತ್ತು ಪುಟ್ಟಸ್ವಾಮಿಯವರು ಒಂದು ಕಡೆ ಹೇಳುತ್ತಾರೆ. ಡೈಕೋಫೂಲ್ ಮತ್ತು ಮಾನೋಕ್ರೋಟೊಫಾಸ್‌ನ್ನು ನೀರಿನಲ್ಲಿ ಬೆರೆಸಿ ಸಿಂಪರಣೆ ಮಾಡಬೇಕು ಎಂಬುದಾಗಿ ಶಿಫಾರಸ್ಸು ಮಾಡುತ್ತಾರೆ. ಈ ಶಿಫಾರಸ್ಸಿನ ಮೇಲೆ ತೋಟಗಾರಿಕೆ ಇಲಾಖೆಯವರು ಸಹ ಒಂದು ಪ್ರಕಟಣೆಯನ್ನು ತೆಂಗು ಬೆಳೆ ಮತ್ತು ನುಸಿಪೀಡೆ ನಿಯಂತ್ರಣವೆಂದು ಹೊರಡಿಸಿದ್ದಾರೆ. ಈ ರೀತಿಯಾಗಿ ನೀವು ಸಸ್ಯಾಂಗೃತ ಸಿಸಮ್ಪ್ಯಾಮೆಟಿಕ್ ಕೀಟನಾಶಕವಾದ ಮಾನೋಕ್ರೋಟೊಫಸನ್ನು ಶೇಕಡಾ 004ರ ಪ್ರಮಾಣದಲ್ಲಿ 10 ಲೀಟರ್ ನೀರಿನಲ್ಲಿ 12 ಮಿಲಿ ಲೀಟರ್‌ನಂತೆ ಔಷಧವನ್ನು ಸಿಂಪಡಿಸಬೇಕು ಅಥವಾ ಬೇರೆ ರೀತಿ ಎಂದು ಹೇಳಿ ಅವರು ಶಿಫಾರಸ್ಸು ಮಾಡುತ್ತಾರೆ. ಇದನ್ನು ಇದುವರೆಗೆ ಕೊಡುತ್ತಾ ಬಂದಿರುತ್ತಾರೆ. ಕೇರಳದಲ್ಲಿ ಕೂಡ ಸಹ ಇಂತಹ ಔಷಧವನ್ನು ಕೊಡುತ್ತಿದ್ದಾರೆ. ಅದೇ ರೀತಿ ನಮ್ಮ ರಾಜ್ಯದಲ್ಲಿ ಕೂಡಾ ಕೊಡುತ್ತಾ ಬಂದಿರುತ್ತಾರೆ. ಇದಾದಮೇಲೆ ದಿನಾಂಕ : 17.12.1999ರಂದು ಅದೇ ವಿಜ್ಞಾನಿಗಳಾದ ಕೃಷಿತಜ್ಞ ಶ್ರೀ ಮಲ್ಲಿಕ್‌ರವರು ಅದರ ಗುಣಲಕ್ಷಣಗಳನ್ನು ವಿವರಿಸುತ್ತಾರೆ. ಇದರಲ್ಲಿ ನಾನು ಮುಖ್ಯವಾದ ಭಾಗವನ್ನು ಹೇಳುತ್ತೇನೆ. ತೆಂಗಿನ ರೋಗನ್ನು ನಿಯಂತ್ರಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಕ್ರಮ ಕೈಗೊಳ್ಳುವ ಸಮಯ ಈಗ ಒದಗಿದೆ. ಇದರ ನಾಶಕ್ಕೆ ಕೇವಲ ರಾಸಾಯನಿಕ ಕೀಟನಾಶಕವನ್ನು ಬಳಸುವುದರಿಂದ ಅಷ್ಟು,

ಪ್ರಯೋಜನ ಕಾಣಲು, ಅಂದರೆ, ಇದು ಅವರ ಅನುಭವದ ಮೇಲೆ, ಈ ಒಂದು ವಿಧಾನದಿಂದ ಯಾವುದೇ ಪ್ರಯೋಜನವಾಗಿರುವುದಿಲ್ಲ. ಅದಕ್ಕಾಗಿ ಈ ರಾಸಾಯನಿಕ ಸಿಂಪರಣೆಯಿಂದ ಇದನ್ನು ತಡೆಗಟ್ಟುವುದಕ್ಕೆ ಆಗುವುದಿಲ್ಲವೆನ್ನುತ್ತಿರುವಾಗಲೆ ಅದೇ ವಿಜ್ಞಾನಿಗಳು ಹೇಳುತ್ತಾರೆ. ಒಂದು ಕಡೆ ಅವರು ಶಿಫಾರಸ್ಸು ಮಾಡಿ, ಅದನ್ನು ತೋಟಗಾರಿಕೆ ಇಲಾಖೆಯವರು ಇಂತಹ ಒಂದು ಟ್ರೀಟ್‌ಮೆಂಟ್ ಕೊಡಬೇಕೆನ್ನುವುದು ನಡೆಯುತ್ತಿರುವಾಗಲೆ ಅದೇವಿಜ್ಞಾನಿಗಳು ಇದರಿಂದ ಏನು ಪ್ರಯೋಜನವಾಗುವುದಿಲ್ಲವೆನ್ನುವ ವಿಚಾರವನ್ನು, ಮತ್ತೊಂದು ಸಾರಿ ಟ್ರೀಟ್‌ಮೆಂಟ್ ಕೊಡುತ್ತಾರೆ. ಅದೇ ರೀತಿ ಕೇರಳದಲ್ಲಿಯೂ ಸಹ ಇಂತಹ ಒಂದು ಸಿಂಪರಣೆಯಿಂದ ಏನು ಪ್ರಯೋಜನವಾಗಿಲ್ಲ, ಏಕೆಂದರೆ, ಕೇರಳದಲ್ಲಿ ಎರಡು ದೊಡ್ಡ ಸಂಸ್ಥೆಗಳು ಇವೆ. ಕಾಸರಗೋಡಿನಲ್ಲಿ ಸಿಬಿಸಿಆರ್‌ಐ ಮತ್ತು ಕಾಯಂಗೊಳದಲ್ಲಿ ಇವೆ. ಈ ಎರಡು ಸಂಸ್ಥೆಗಳು ತೆಂಗು ಬೆಳೆಯ ಸಂಶೋಧನೆಯ ಸಲುವಾಗಿಯೇ ಇರತಕ್ಕಂಥ ಸಂಸ್ಥೆಗಳಾಗಿವೆ. ನಾನು 15 ವರ್ಷಗಳ ಹಿಂದೆ ಈ ಖಾತೆಯಲ್ಲಿದ್ದಾಗ ಅಲ್ಲಿಗೆ ಹೋಗಿದ್ದೆ. ಇದು ಭಾರತದಲ್ಲಿಯೇ ದೊಡ್ಡದಾದ ಪ್ರತಿಷ್ಠಿತವಾದ ಸಂಸ್ಥೆ. ಅವರು ಎಷ್ಟೇ ಸಂಶೋಧನೆಯನ್ನು ಮಾಡಿದರೂ ಸಹ ಅದು ಫಲಕಾರಿಯಾಗಿಲ್ಲ. ಯಾವ ಒಂದು ಔಷಧಿಯನ್ನು ಕೊಡಬೇಕು ಯಾವ ರೀತಿಯಾಗಿ ಇದಕ್ಕೆ ಚಿಕಿತ್ಸೆಯನ್ನು ಮಾಡಬೇಕು ಇದನ್ನು ಹೇಗೆ ತಡೆಗಟ್ಟಬೇಕು ಎನ್ನುವ ಬಗ್ಗೆ ಅವರು ಕೂಡ ಯಶಸ್ವಿಯಾಗಿರುವುದಿಲ್ಲ. ಅಷ್ಟೊಂದು ಖರ್ಚು ಮಾಡಿ ಅಷ್ಟೊಂದು ಸಂಶೋಧನೆಗಳನ್ನು ಮಾಡಿದರೂ ಅದನ್ನು ಏನು ಮಾಡುವುದಕ್ಕಾಗಿಲ್ಲ. ಈ ರಾಸಾಯನಿಕ ಔಷಧವನ್ನು ಕೊಡತಕ್ಕಂಥಾದ್ದು ಅಪಾಯಕಾರಿ, ಮನುಷ್ಯ ಈ ಒಂದು ಚಿಕಿತ್ಸೆ ಪಡೆದಂಥ ಎಳೆನೀರನ್ನು ಕುಡಿದರೆ ರೋಗ ಬರುತ್ತದೆ. ಇದರಿಂದ ಅಪಾಯಕಾರಿ ಎನ್ನುವ ವಿಚಾರವನ್ನು ಮನಗಂಡು ಅವರು ಒಂದು ಪಬ್ಲಿಕ್ ಇಂಟ್ರೆಸ್ಟ್ ಲಿಟಿಗೇಶನ್ ಕೇರಳ ಕೋರ್ಟಿನಲ್ಲಿ ಹಾಕಿದ್ದಾರೆ. "Reports on human health indicates eye contact will cause plain bleeding, pupil's constriction and bulrred vision. In fact, apublic interest lit gation has been filed in Kerala on reported harmful effects of Dicophol and other, agreed Prof. Puttaswamy. ಇದನ್ನು ತಾವು ನೋಡಿದ್ದೀರಾ, ಪ್ರೊ : ಪುಟ್ಟಸ್ವಾಮಿಯವರು ಇದನ್ನು ಶಿಫಾರಸ್ಸು ಮಾಡಿದರೆ ಅವರ ಪ್ರಕಾರ ಹಾನಿಕಾರಕವೆಂದು ಇಂಟ್ರೆಸ್ಟ್ ಲಿಟಿಗೇಶನ್ ಕೇರಳ ಕೋರ್ಟಿನಲ್ಲಿ ಹಾಕಿದ್ದಾರೆಂದು ಒಂದು ಗೊಂದಲ ಕೂಡ ಇದೆ. ಇವತ್ತು ವಿಜ್ಞಾನಿಗಳು ಸಹ ಯಾವ ಚಿಕಿತ್ಸೆಯನ್ನು ಕೊಡಬೇಕು, ಇದನ್ನು ಯಾವ ರೀತಿಯಾಗಿ ತಡೆಗಟ್ಟಬೇಕು ಎನ್ನುವ ಬಗ್ಗೆ ಒಂದು ನಿಖರವಾದ ತೀರ್ಮಾನಕ್ಕೆ ಅವರೇ ಬಂದಿರುವುದಿಲ್ಲ, ಒಂದು ಕಡೆ ರಾಸಾಯನಿಕ ಚಿಕಿತ್ಸೆ ಕೊಡಬಹುದೆಂದು ಹೇಳಿದರು. ಮತ್ತೆ ಅದರಿಂದ ಪ್ರಯೋಜನವಾಗುವುದಿಲ್ಲ ಅದು ಹಾನಿಕಾರಕ ಅದನ್ನು ನಿಲ್ಲಿಸಬೇಕೆಂದು ಕೂಡ ಅವರೇ ಹೇಳಿದ್ದಾರೆ ಮತ್ತೆ ಇನ್ನು ಯಾವುದನ್ನು ಕೊಡುತ್ತೀರಿ. ಇವತ್ತು ಸರ್ಕಾರ ಇದರ ಬಗ್ಗೆ ಏನು ಮಾಡಬೇಕು ಎನ್ನುವ ಸ್ಥಿತಿಯಲ್ಲಿಲ್ಲ. ನಮ್ಮ ಸದಸ್ಯರುಗಳಿಗೆ ಸರ್ಕಾರ ಕೊಟ್ಟ ಉತ್ತರವನ್ನು ನಾನು ಓದಿದೆ, ಮಾನ್ಯ ಸದಸ್ಯರುಗಳು ಏನು ಹೇಳುತ್ತಾರೆ ಈ ಸರ್ಕಾರ ಬಿಡುಗಡೆ ಮಾಡಿರುವ ಹಣ ಸಾಲದು, ಸುಮಾರು 2-3 ಕೋಟಿ ಹಣ ಕೊಟ್ಟರೂ ಸಾಕಾಗುವುದಿಲ್ಲ. ಇಲ್ಲಿ ಹಣದ ಪ್ರಶ್ನೆ ಅಲ್ಲ, ಅದರೆ, ಇದಕ್ಕೆ ಯಾವ ರೀತಿಯಾದ ಚಿಕಿತ್ಸೆಯನ್ನು ಕೊಡಬೇಕು, ಇದನ್ನು ಯಾವರೀತಿಯಾಗಿ ತಡೆಗಟ್ಟಬೇಕು ಎನ್ನುವುದರ ಬಗ್ಗೆ ಸರಿಯಾಗಿ ಸಂಶೋಧನೆಯನ್ನು ಮಾಡಿರುವುದಿಲ್ಲ, ವಿಜ್ಞಾನಿಗಳು ತಮ್ಮ ಒಂದು ನಿಲುವನ್ನು ಸರಿಯಾಗಿ ಪ್ರಕಟಣೆ ಮಾಡಿರುವುದಿಲ್ಲ, ಹೀಗಾಗಿ ರಾಜಕಾರಣಿಗಳಾದ ನಾವು ಏನು ಹೇಳುತ್ತೇವೆ, ದುಡ್ಡು ಸಾಕಾಗುವುದಿಲ್ಲ

ಸರ್ಕಾರ ಸರಿಯಾಗಿ ಕ್ರಮ ತೆಗೆದುಕೊಳ್ಳುತ್ತಿಲ್ಲ ಎಂದು ಹೇಳುತ್ತೇವೆ, ಅದರಿಂದ ಏನು ಪ್ರಯೋಜನವಾಗುವುದಿಲ್ಲ. ಇವತ್ತು ತೆಂಗು ಶೇ. 25% ರಷ್ಟು ಲಾಸ್ ಆಗಿದೆ ಎಂದು ಹೇಳಿದ್ದಾರೆ, ಅದನ್ನು ನಾವು ನೋಡಿದರೆ ಏನು ಲಾಸ್ ಅದಂತೆ ಕಾಣಿಸುತ್ತಿಲ್ಲ. ಆದರೆ ಈ ರೋಗ ಮಳೆಗಾಲದಲ್ಲಿ ಜಾಸ್ತಿಯಾಗುತ್ತದೆ. ಮಳೆಗಾಲದಲ್ಲಿ ಇನ್ನು 4-5 ತಿಂಗಳಲ್ಲಿ ಶೇ. 50 ಪರ್ಸೆಂಟ್ ಜಾಸ್ತಿ ಆಗುತ್ತದೆ. ಇದನ್ನು ನಂಬಿಕೊಂಡಿರತಕ್ಕಂಥ ರೈತರು ನೆಲಸಮವಾಗುತ್ತಾರೆ. ಇವತ್ತು ನಮ್ಮ ಇಂಡಿಯಾ ದೇಶದ ಪ್ರೊಡಕ್ಷನ್ 50 ಪರ್ಸೆಂಟ್ ಕಡಿಮೆಯಾದರೆ ಅದರ ಮುಂದಿನ ಭವಿಷ್ಯ ಏನಾಗುತ್ತದೆ ಎನ್ನುವುದನ್ನು ಊಹಿಸುವುದಕ್ಕೆ ಸಾಧ್ಯವಿಲ್ಲ. ಇದನ್ನು ನಂಬಿಕೊಂಡಿರತಕ್ಕಂಥ ದೊಡ್ಡ ದೊಡ್ಡ ರಾಸಾಯನಿಕ ಕಾರ್ಖಾನೆಗಳಾದ ಹಿಂದೂಸ್ತಾನ್ ಪೆಟ್ರೋಲಿಯಂ ಇರಬಹುದು, ಟಾಟಾ ಕಾರ್ಖಾನೆ ಇರಬಹುದು, ನಾವು ಆಯಿಲ್‌ನ್ನು ನಿರೀಕ್ಷೆಯನ್ನು ಮಾಡಿಕೊಂಡಿದ್ದೇವೆ, ಆ ಆಯಿಲ್ ಸಿಗದಿದ್ದಾಗ ಅವರು ಹೊರದೇಶದಿಂದ ತರಿಸಿಕೊಳ್ಳುತ್ತಾರೆ. ಇವತ್ತು ನಮ್ಮ ದೇಶದಲ್ಲಿ ಒಂದು ತೆಂಗಿನಕಾಯಿಗೆ 4-5 ರೂಪಾಯಿ ರೈತರಿಗೆ ಸಿಗುತ್ತದೆ, ಕೊಬ್ಬರಿ 7-8 ರೂಪಾಯಿಗೆ ಸಿಗುತ್ತದೆ, ಆಗ ಲಾಭ ಸಿಗುತ್ತಿತ್ತು. ಅದೇ ತೆಂಗಿನಕಾಯಿ ಇಂಡೋನೇಷ್ಯದಲ್ಲಿ 2-3 ರೂಪಾಯಿಗಳಿಗೆ ಸಿಗುತ್ತದೆ. ಬೆಲೆ ಕುಸಿತ ಬಿದ್ದಾಗ ನಮ್ಮ ರೈತರಿಗೆ ಎರಡು ರೂಪಾಯಿಗಳು ಕೂಡ ಸಿಗುವುದಿಲ್ಲ. ನೂರಾರು ಕೋಟಿ ರೂಪಾಯಿಗಳನ್ನು ಹಾಕಿ ಸ್ಥಾಪನೆ ಮಾಡಿರತಕ್ಕಂಥ ಕಾರ್ಖಾನೆ ಎಣ್ಣೆಯನ್ನು ಬೇರೆ ದೇಶದಿಂದ ರಫ್ತು ಮಾಡಿಕೊಳ್ಳುತ್ತಾರೆ, ಅದಕ್ಕೆ ಕೇಂದ್ರ ಸರ್ಕಾರ ಅನುಮತಿಯನ್ನು ಕೊಡಬೇಕಾಗುತ್ತದೆ. ಆ ರೀತಿಯಾಗಿ ಒಂದು ವೇಳೆ ಆದರೆ ಕಾರ್ಖಾನೆಗಳು ನಮ್ಮ ರಾಜ್ಯದಲ್ಲಿ ಏನಾಗಬಹುದು, ಆಗ ರೈತನ ಪರಿಸ್ಥಿತಿ ಏನಾಗುತ್ತದೆ ಎನ್ನುವುದನ್ನು ಊಹಿಸುವುದಕ್ಕೆ ನಮಗೆ ಸಾಧ್ಯವಾಗುವುದಿಲ್ಲ. ಇದನ್ನು ಬಹಳ ಹಗುರವಾಗಿ ತೆಗೆದುಕೊಳ್ಳತಕ್ಕಂಥ ವಿಚಾರವಲ್ಲ. ಇದರ ಬಗ್ಗೆ ಬಹಳ ತೀಕ್ಷ್ಣವಾಗಿ ವಿಚಾರ ಮಾಡಬೇಕಾಗುತ್ತದೆ. ನಿಮ್ಮ ವಿಶ್ವವಿದ್ಯಾನಿಲಯದವರು ಅಥವಾ ನಿಮ್ಮ ಸರ್ಕಾರದವರು ಏನು ಮಾಡಿದ್ದೀರಿ ಇದರ ಬಗ್ಗೆ ಏನು ಕ್ರಮವನ್ನು ಕೈಗೊಂಡಿದ್ದೀರಿ, ಸಂಶೋಧನೆಯನ್ನು ಮಾಡುತ್ತಿದೆ ಎಂದು ನಮಗೆ ರಿಪ್ಲೈ ಕೊಟ್ಟಿರುತ್ತೀರಿ. ಏನು ಸಂಶೋಧನೆ ಮಾಡಿದ್ದಾರೆ. ನಿಮ್ಮ ಯುನಿವರ್ಸಿಟಿ ಆಫ್ ಅಗ್ರಿಕಲ್ಚರ್ ಸೈನ್ಸ್‌ನಲ್ಲಿ ನಿಮ್ಮ ಎಂಟಮಾಲಜಿ ಡಿಪಾರ್ಟ್‌ಮೆಂಟ್‌ನಲ್ಲಿ ಯಾರೂ ಇದನ್ನು ಸಂಶೋಧನೆ ಮಾಡುತ್ತಿಲ್ಲ. ಏನು ಶಿಫಾರಸ್ಸು ಮಾಡಿದ್ದಾರೆ ಎನ್ನುವುದನ್ನು ನೀವು ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ. ನನಗೆ ಬಂದಿರತಕ್ಕಂಥ ಮಾಹಿತಿ ಪ್ರಕಾರ ಅದನ್ನುತಾವು ಕ್ರಾಸ್-ಚೆಕ್ ಮಾಡಬೇಕು, ಮತ್ತು ಅದರ ಬಗ್ಗೆ ವಿಚಾರಣೆಯನ್ನು ಸಹ ಮಾಡಬೇಕಾಗುತ್ತದೆ. ಏಕೆಂದರೆ ಈ ರಾಜಕೀಯ ಹಾಗೂ ವೈಯಕ್ತಿಕ ಪ್ರತಿಷ್ಠೆ ನಮ್ಮ ರಾಜ್ಯದ ಜನರ ಭವಿಷ್ಯವನ್ನು ಹಾಳು ಮಾಡುವುದಕ್ಕೆ ಹೋಗಬಾರದು. ಒಬ್ಬನ ಪ್ರತಿಷ್ಠೆ ಇದ್ದರೆ ಅದನ್ನು ಅವನು ತನ್ನ ಮನೆಯಲ್ಲಿ ಇಟ್ಟುಕೊಳ್ಳಲಿ, ಯಾರಾದರೂ ವಿಜ್ಞಾನಿಗಳು ಆಗಲಿ ಅಥವಾ ಮಂತ್ರಿಗಳಾಗಲಿ ಅಥವಾ ಅಧಿಕಾರಿಗಳಾಗಲಿ ತಮ್ಮ ವೈಯಕ್ತಿಕ ಪ್ರತಿಷ್ಠೆಯಿಂದ ಇಡೀ ರಾಜ್ಯದ ಜನರನ್ನು ಕಾಡತಕ್ಕಂಥ ಸಮಸ್ಯೆಯನ್ನು ಬಹಳ ಹಗುರವಾಗಿ ತೆಗೆದುಕೊಂಡರೆ ಸರ್ಕಾರ ಅದನ್ನು ಸುಲಭವಾಗಿ ತೆಗೆದುಕೊಳ್ಳಬಾರದು. ಇದಕ್ಕೆ ಬೇರೆ ಒಂದು ವಿಧಾನವನ್ನು ಕಂಡು ಹಿಡಿದಿದ್ದರು. ಸಿರಂಜ್ ಮುಖಾಂತರ ಕೊಡತಕ್ಕಂಥ ಒಂದು ಟೆಕ್ನಾಲಜಿಯನ್ನು ಮಾಡಿ ಅದರ ಮುಖಾಂತರ ಟ್ರೀಟ್‌ಮೆಂಟ್ ಕೊಡುತ್ತಿದ್ದರು. ಅದನ್ನು ಮೊದಲು ಕಂಡು ಹಿಡಿದವರು ಅರಸೀಕೆರೆಯಲ್ಲಿರುವ ಅಸಿಸ್ಟೆಂಟ್ ಪ್ರೊಫೆಸರ್ ಶ್ರೀ ಶಿವಶಂಕರವರು. ಇವರು ಪ್ರಥಮ ಬಾರಿಗೆ ಸಿರಂಜ್ ಮೂಲಕ ಟ್ರೀಟ್‌ಮೆಂಟ್ ಕೊಡತಕ್ಕಂಥ ಟೆಕ್ನಾಲಜಿಯನ್ನು ಕಂಡು ಹಿಡಿದಿದ್ದವರು. ಇದನ್ನು ನಂತರ ಯುನಿವರ್ಸಿಟಿಯ ಒಳಗಡೆ ಪ್ಯಾಕೇಜ್ ಆಫ್

ಪ್ರಾಕ್ಟಿಸ್‌ನಲ್ಲಿ ಇದು ಒಳ್ಳೆಯ ವಿಧಾನವೆಂದು ಒಪ್ಪಿಕೊಂಡರು. ಆದು ಹೊರಗಡೆ ಬರುವುದಕ್ಕೆ ಬದಲಾಗಿ ಅಲ್ಲಿ ಇನ್ನೊಬ್ಬ ಪ್ರೊಫೆಸರ್ ನೇರವಾಗಿ ಇದನ್ನು ನಾನು ಟೆಕ್ನಾಲಜಿ ಮಾಡಿರುವಂಥಾದ್ದು ಎಂದು ಹೇಳುತ್ತಾರೆ. ಆದು ಹೊರಗಡೆ ಬಂದ ತಕ್ಷಣ ಏನು ಹೇಳುತ್ತಾರೆ. ಪತ್ರಿಕೆಗಳಿಗೆ ನಂತರ ಅವರೇ

4.30 ಪಿ.ಎಂ.

ಹೋಗುತ್ತಾರೆ. ಇದು ದಿನಾಂಕ: 13.3.1999ರ ಹಿಂದೂ ಪತ್ರಿಕೆಯಲ್ಲಿ ಏನು ಬಂದಿದೆ ಎಂದರೆ "Research findings plagiarised" ಅಂದರೆ, ವಿಮಾನವನ್ನು ಯಾರೋ ಅಪಹರಿಸಿಕೊಂಡು ಹೋದರೆ ಅದನ್ನು ಹೈಜಾಕಿಂಗ್ ಎನ್ನುತ್ತಾರೆ. ಒಬ್ಬರು ಬರೆದಂಥ ಪುಸ್ತಕವನ್ನು ಇನ್ನೊಬ್ಬರು ಕಾಪಿ ಮಾಡಿ ಬರೆದರೆ ಅದನ್ನು ಕಾಪಿರೈಟ್ ವೈರೇಟ್ ಎನ್ನುತ್ತಾರೆ. ಒಬ್ಬರು ಸಂಶೋಧನೆ ಮಾಡಿ ಕಂಡುಹಿಡಿದಿರತಕ್ಕದ್ದನ್ನು ಇನ್ನೊಬ್ಬರು ನಾನು ಅದನ್ನು ಸಂಶೋಧನೆ ಮಾಡಿದ್ದೇನೆ ಎನ್ನುವುದಕ್ಕೆ Plagiarizing ಎನ್ನುತ್ತಾರೆ. ಇದನ್ನು ನಾನು ಕಂಡು ಹಿಡಿದಿದ್ದೇನೆಂದು ಹೇಳಿದ ತಕ್ಷಣ, ಸಿವಿಲ್ ಟೆಕ್ನಾಲಜಿ ಬಗ್ಗೆ ಯಾವ ಜನರು ಇದರ ಅನುಕೂಲವನ್ನು ಪಡೆದಿದ್ದರೋ ಅವರಿಗೆ ನೋಮಾಗಿ ಅವರು ಒಂದು ಪತ್ರಿ[illegible] ಹೇಳಿಕೆ ಕೊಡುತ್ತಾರೆ. ಆದು ಇವರಲ್ಲ ಮಾಡಿದ್ದು ಅದನ್ನು ಡಾ: ಶಿವಶಂಕರ್ ಎನ್ನುವವರು ಮಾಡಿದ್ದು ಎಂದು ಹೇಳಿದಾಗ, ಈ ವಿಷಯ ಬಯಲಿಗೆ ಬಂತಲ್ಲ ಎಂದು ಆಗ ವಿಶ್ವವಿದ್ಯಾನಿಲಯದವರು ಆಸಿಸ್ಟೆಂಟ್ ಪ್ರೊಫೆಸರ್‌ಗೆ ಇದರ ಬಗ್ಗೆ ವಿವರಣೆ ಕೊಡಿ ಎಂದು ನೋಟೀಸ್ ಕೊಡುತ್ತಾರೆ. ಆಗ ಈ ವಿಷಯ [illegible] ಬಯಲಿಗೆ ಬಂತಲ್ಲ ಎಂದು ಹೆಡ್-ಆಫ್-ದಿ-ಡಿಪಾರ್ಟ್‌ಮೆಂಟ್ ಪ್ರೊಫೆಸರ್‌ರವರು ಕೋರ್ಟಿಗೆ ಹೋಗುತ್ತಾರೆ. ಅವರಿಗೆ ನೀವು ಏನು ಮಾತನಾಡಬಾರದು ಎಂದು ಕೋರ್ಟಿನಿಂದ ಇನ್‌ಜೆಂಕ್ಷನ್ ಆರ್ಡರ್ ತರುತ್ತಾರೆ. ಈ ಇನ್‌ಜೆಂಕ್ಷನ್ ಆರ್ಡರ್ ತಂದ ತಕ್ಷಣ ಈ ಸರ್ಕಾರ ಯೋಚಿಸಿರತಕ್ಕಂಥಾದ್ದು ಅವರು ವೈಯಕ್ತಿಕವಾಗಿ ಕೋರ್ಟಗೆ ಹೋಗಿದ್ದಾರೆ? ಅಥವಾ ವಿಶ್ವವಿದ್ಯಾನಿಲಯದ ಹೆಡ್-ಆಫ್-ದಿ-ಡಿಪಾರ್ಟ್‌ಮೆಂಟ್ ಆಗಿ ಕೋರ್ಟಿಗೆ ಹೋಗಿದ್ದಾರಾ? ಈ ರೀತಿ ಹೆಡ್-ಆಫ್-ದಿ-ಡಿಪಾರ್ಟ್‌ಮೆಂಟ್ ಹೋಗಬೇಕಾದರೆ ಇದಕ್ಕೆ ವಿಶ್ವವಿದ್ಯಾನಿಲಯದವರು ಪರ್ಮಿಷನ್ ಕೊಟ್ಟಿದ್ದಾರೆಯೇ? ಸರ್ಕಾರದವರು ಪರ್ಮಿಷನ್ ಕೊಟ್ಟಿದ್ದಾರೆಯೇ? ಇದರಬಗ್ಗೆ ತಾವು ಚೆಕ್ ಮಾಡಬೇಕು.

ಛೇರ್ಮನ್ : ಮಾನ್ಯ ಸೋಮಶೇಖರ್‌ರವರೇ, ಒಂದು ನಿಮಿಷ. ಕರ್ನಾಟಕ ಧನ ವಿನಿಯೋಗ ವಿಧೇಯಕ-2000 ಅನ್ನು ಇಲ್ಲಿ ಮಂಡಿಸಿ, ಪಾಸ್ ಮಾಡಿ ಮೇಲ್ಮನೆಗೆ ಕಳುಹಿಸಬೇಕಾಗಿದೆ, ಆದ್ದರಿಂದ, ಇದನ್ನು ಮಂಡಿಸಿ ಪಾಸ್ ಮಾಡಿದ ನಂತರ ತಾವು ತಮ್ಮ ಭಾಷಣವನ್ನು ಮುಂದುವರಿಸಬಹುದು.

ಶಾಸನ ರಚನೆ

ಕರ್ನಾಟಕ ಧನ ವಿನಿಯೋಗ ವಿಧೇಯಕ, 2000

ಮಂಡಿಸಲು ಅನುಮತಿ ಕೋರಿಕೆ

ಶ್ರೀ ಡಿ.ಬಿ.ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಛೇರ್ಮನ್‌ರವರೆ, "2000ರ ಕರ್ನಾಟಕ ಧನ ವಿನಿಯೋಗ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ."